# ಕರ್ನಾಟಕ ವಿಧಾನ ಪರಿಷತ್ತು

1. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1114
2. ಸದಸ್ಯರ ಹೆಸರು : ಶ್ರೀ ಸಿ.ಎನ್.ಮಂಜೇಗೌಡ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3. ಉತ್ತರಿಸಬೇಕಾದ ದಿನಾಂಕ : 12-03-2026
4. ಉತ್ತರಿಸುವವರು : ಉಪ ಮುಖ್ಯಮಂತ್ರಿಗಳು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕಳೆದ ಮೂರು ವರ್ಷಗಳಿಂದ ಮೆಟ್ರೋ ಪ್ರಯಾಣಿಕರ ಸಂಖ್ಯೆ ಗಣನೀಯವಾಗಿ ಹೆಚ್ಚಾಗಿದ್ದರೂ, ಮೆಟ್ರೋ ದರ ಪರಿಷ್ಕರಣೆ ಮಾಡಲು ಸರ್ಕಾರ ಉದ್ದೇಶಿಸಿದೆಯೇ: ಹಾಗಿದ್ದಲ್ಲಿ, ದರ ಏರಿಕೆಗೆ ಇರುವ ಮಾನದಂಡಗಳೇನು ಮತ್ತು ಇದರಿಂದ ಸಾಮಾನ್ಯ ಪ್ರಯಾಣಿಕರ ಮೇಲೆ ಉಂಟಾಗುವ ಆರ್ಥಿಕ ಹೊರೆಯ ಬಗ್ಗೆ ಸರ್ಕಾರದ ನಿಲುವೇನು; | ಮೆಟ್ರೋ ರೈಲು (ಕಾರ್ಯಾಚರಣೆ ಮತ್ತು ನಿರ್ವಹಣೆ) ಕಾಯ್ದೆ-2002 ರನ್ವಯ ಪ್ರಯಾಣ ದರ ನಿಗದಿ ಸಮಿತಿಯನ್ನು ರಚಿಸಲಾಗಿದೆ. ಸದರಿ ಸಮಿತಿಯ ಶಿಫಾರಸ್ಸಿನನ್ವಯ ದರ ಪರಿಷ್ಕರಣೆಯನ್ನು ದಿನಾಂಕ:09.02.2025 ರಿಂದ ಜಾರಿಗೆ ತರಲಾಗಿದೆ.<br><br>ಪ್ರಯಾಣ ದರ ನಿಗದಿ ಸಮಿತಿ (FFC)ಯು 3 ಪ್ರಮುಖ ಅಂಶಗಳಾದ, ಸಿಬ್ಬಂದಿ ವೆಚ್ಚ, ಇಂಧನ ವೆಚ್ಚ, ನಿರ್ವಹಣೆ ಮತ್ತು ಆಡಳಿತ ವೆಚ್ಚಗಳನ್ನು ಆಧಾರವಾಗಿಸಿಕೊಂಡು ದರ ಪರಿಷ್ಕರಣೆ ಮಾಡುತ್ತದೆ.<br><br>ದರ ನಿಗದಿ ಸಮಿತಿಯು ಶಿಫಾರಸ್ಸು ಮಾಡಿದ ದರಗಳನ್ನು ಜಾರಿಗೆ ತಂದ ದಿನಾಂಕದಿಂದ ಒಂದು ವರ್ಷ ಪೂರ್ಣಗೊಂಡ ನಂತರ, ಗರಿಷ್ಠ ವಾರ್ಷಿಕ 5% ಮಿತಿಯೊಳಗಾಗಿ ಪರಿಷ್ಕರಣೆ ಮಾಡಲು ಶಿಫಾರಸ್ಸು ಮಾಡಿರುತ್ತದೆ.<br><br>ಪ್ರಯಾಣ ದರ ನಿಗದಿ ಸಮಿತಿ (FFC)ಯ ಶಿಫಾರಸ್ಸುಗಳು ಮೆಟ್ರೋ ರೈಲು ಕಂಪನಿಗೆ ಬಾಧ್ಯಕರ (Binding)ವಾಗಿರುತ್ತವೆ. |
| ಆ) | ಕಳೆದ 3 ವರ್ಷಗಳಲ್ಲಿ ಕೇಂದ್ರ ಸರ್ಕಾರವು ಮೆಟ್ರೋ ಯೋಜನೆಗೆ ಬಿಡುಗಡೆ ಮಾಡಿದ ಮೊತ್ತ ಎಷ್ಟು; (ವರ್ಷವಾರು ಮಾಹಿತಿ ನೀಡುವುದು); | ಕಳೆದ 3 ವರ್ಷಗಳಲ್ಲಿ ಬೆಂಗಳೂರು ಮೆಟ್ರೋ ರೈಲು ಯೋಜನೆಗೆ ಭಾರತ ಸರ್ಕಾರವು ಬಿಡುಗಡೆ ಮಾಡಿದ ಅನುದಾನವು ಕೆಳಕಂಡಂತಿದೆ: |

**(ರೂ. ಕೋಟಿಗಳಲ್ಲಿ)**

| ವಿವರಗಳು | 2022-23 | 2023-24 | 2024-25 | 2025-26 till 26.02.2026 |
|---|---|---|---|---|
| ಸಾಮ್ಯಷೇರು | 506.22 | 842.16 | 131.67 | 590.00 |
| ಅಧೀನ ಸಾಲ | 10.00 | 232.00 | 106.91 | 210.71 |
| ಪಾಸ್ ಥ್ರೂ ಅಸಿಸ್ಟೆನ್ಸ್ | 3,525.39 | 2,543.00 | 4,576.00 | 892.53 |
| **ಒಟ್ಟು** | **4,041.61** | **3,617.16** | **4,814.58** | **1,693.24** |

| | | |
|---|---|---|
| ಇ) | ಮೆಟ್ರೋ ಕಾರ್ಯಾಚರಣೆಯ ವೆಚ್ಚವನ್ನು (Operational Cost) ಸರಿದೂಗಿಸಲು ಮತ್ತು ಸಾಲ ಮರುಪಾವತಿ ಮಾಡಲು ಸರ್ಕಾರವು ಕೇವಲ ದರ ಏರಿಕೆಯನ್ನೇ ಅವಲಂಬಿಸಿದೆಯೇ ಅಥವಾ ಇತರೆ ಆದಾಯದ ಮೂಲಗಳನ್ನು (Non-Fare Revenue) ಕಂಡುಕೊಳ್ಳುವಲ್ಲಿ ಕೈಗೊಂಡಿರುವ ಕ್ರಮಗಳೇನು; | ಮೆಟ್ರೋ ಕಾರ್ಯಾಚರಣೆಯ ವೆಚ್ಚವನ್ನು (Operational Cost) ಸರಿದೂಗಿಸಲು ಮತ್ತು ಸಾಲ ಮರುಪಾವತಿ ಮಾಡಲು ಸರ್ಕಾರವು ಕೇವಲ ದರ ಏರಿಕೆಯನ್ನೇ ಅವಲಂಬಿಸಿರುವುದಿಲ್ಲ.<br><br>ಬದಲಾಗಿ, ಪ್ರಯಾಣೇತರ ಆದಾಯ (Non-Farebox Revenue)ಗಳನ್ನು ಅಂದರೆ, ಮೆಟ್ರೋ ನಿಲ್ದಾಣಗಳ ಖಾಲಿ ಜಾಗಗಳನ್ನು ಬಾಡಿಗೆಗೆ ನೀಡುವುದು, ಪಾರ್ಕಿಂಗ್ ಒಪ್ಪಂದಗಳು, Train Wrapping Advertisement, ಮೆಟ್ರೋ ನಿಲ್ದಾಣದ ಒಳಗೆ ಹಾಗೂ ಹೊರಗೆ ಜಾಹೀರಾತುಗಳು, ಆಪ್ಟಿಕಲ್ ಫೈಬರ್ ಲೀಸಿಗೆ ನೀಡುವುದು, 30 ವರ್ಷಗಳ ಕಾಲ ನಿಲ್ದಾಣಗಳ ಅರ್ಧ-ನಾಮಕರಣ (ಸೆಮಿ-ನೇಮಿಂಗ್), ಆಸ್ತಿ ಸಂಯುಕ್ತ ಅಭಿವೃದ್ಧಿ ಇತ್ಯಾದಿಗಳನ್ನು ಒಳಗೊಂಡಿರುತ್ತದೆ.<br><br>ಇದರಿಂದಾಗಿ, 2024-25ನೇ ಹಣಕಾಸು ವರ್ಷದಲ್ಲಿ, ಪ್ರಯಾಣೇತರ ಆದಾಯವಾಗಿ (Non-Farebox Revenue) ರೂ.54.97 ಕೋಟಿ (ಪ್ರಯಾಣ ದರ ಆದಾಯದ 7.29%) ಬಂದಿರುತ್ತದೆ. |
| ಈ) | ಬೆಂಗಳೂರು ಮೆಟ್ರೋ ರೈಲು ನಿಗಮವು (BMRCL) ಪ್ರಸ್ತುತ ಎದುರಿಸುತ್ತಿರುವ ಒಟ್ಟು ಸಾಲದ ಮೊತ್ತ ಎಷ್ಟು; ಈ ಸಾಲದ ಮೇಲಿನ ಬಡ್ಡಿಯನ್ನು ಪಾವತಿಸಲು ಸರ್ಕಾರವು ವಾರ್ಷಿಕವಾಗಿ ನೀಡುತ್ತಿರುವ ಆರ್ಥಿಕ ನೆರವು ಎಷ್ಟು? | ಪ್ರಸ್ತುತ, ಬೆಂಗಳೂರು ಮೆಟ್ರೋ ರೈಲು ನಿಗಮದ ಬಾಕಿಯಿರುವ ಸಾಲದ ಮೊತ್ತ ರೂ.17,679.29 ಕೋಟಿಗಳಾಗಿರುತ್ತದೆ.<br><br>ನಿರ್ಮಾಣ ಅವಧಿಯ ಬಡ್ಡಿ (Interest During Construction) ಯನ್ನು ಕರ್ನಾಟಕ ಸರ್ಕಾರವು ಬಡ್ಡಿ ರಹಿತ ಅಧೀನ ಸಾಲದ (Interest Free Subordinate Debt) ರೂಪದಲ್ಲಿ ನೀಡುತ್ತದೆ. ಇದುವರೆಗೆ, ರೂ.353.10 ಕೋಟಿಗಳ ಮೊತ್ತವನ್ನು ನೀಡಲಾಗಿದೆ. ಕಾರ್ಯಾಚರಣೆಯಲ್ಲಿರುವ ಆಸ್ತಿಗಳ ಮೇಲಿನ ಬಡ್ಡಿಯನ್ನು (ಲಾಭ-ನಷ್ಟ ಖಾತೆಗೆ ದಾಖಲಿಸಲಾದ) ಒಳಗೊಂಡಂತೆ ನಗದು ನಷ್ಟಗಳನ್ನು ಕರ್ನಾಟಕ ಸರ್ಕಾರ ಮರುಪಾವತಿಸುತ್ತದೆ. ಇದುವರೆಗೆ ಕರ್ನಾಟಕ ಸರ್ಕಾರದಿಂದ ರೂ.1,064.32 ಕೋಟಿಗಳನ್ನು ಮರುಪಾವತಿಸಲಾಗಿದೆ.<br><br>ಮುಂದುವರೆದು, ಹೆಚ್ಚುವರಿಯಾಗಿ, ಭಾರತ ಸರ್ಕಾರದ ಮೂಲಕ ಬಾಹ್ಯ ಹಣಕಾಸು ಸಂಸ್ಥೆಗಳಿಂದ ಪಡೆದ ಹಿರಿಯ ಸಾಲದ (Senior Debt) ಮೂಲ ಧನ ತೀರಿಕೆಗೆ ಕರ್ನಾಟಕ ಸರ್ಕಾರವು ಹಣಕಾಸು ಸಹಾಯವನ್ನೂ ಒದಗಿಸುತ್ತದೆ. ಇದುವರೆಗೆ ಕರ್ನಾಟಕ ಸರ್ಕಾರ (GoK)ವು ಬಿಎಮ್‌ಆರ್‌ಸಿಎಲ್‌ಗೆ ರೂ.4,002.23 ಕೋಟಿ ಬಿಡುಗಡೆ ಮಾಡಿದೆ. |

ಕಡತ ಸಂಖ್ಯೆ: ನಅಇ 36 ಪಿ.ಆರ್.ಜೆ 2026

(ಡಿ. ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ